

ಬ್ಲ್ಯಾಕ್ ರಾಕ್ ಮರುಭೂಮಿಯಲ್ಲಿ ಶಕ್ತಿ ಪ್ರದರ್ಶನ. ವರ್ಷಕ್ಕೊಮ್ಮೆ ನಡೆಯುವ ಮೇಳದಲ್ಲಿ ಎಲ್ಲರೂ ಶಕ್ತ್ಯಾನುಸಾರ ತಮ್ಮ ಶಕ್ತಿ ಮೆರೆಸುವವರೇ. ಕುಂಭ ಮೇಳದಲ್ಲಿ ನಾಗಾ ಸಾಧುಗಳು ಏನೆಲ್ಲಾ ಶೋ ಮಾಡುತ್ತಾರೋ ಅದಕ್ಕಿಂತ ಬೊಂಬಾಟ್ ಇರುತ್ತದೆ ಈ ಮೇಳ. ಆಗ ಮರುಭೂಮಿಯಲ್ಲಿ ಹೊಳೆ ಹರಿಯುತ್ತದೆ, ಮದ್ಯದ್ದು.

ನೀರಿನಲ್ಲಿ ಫ್ಯಾಷನ್ ಶೋ ಆಯಿತು, ಈಗ ಕಟ್ಟಡದ ಮೇಲೆ ಪ್ರದರ್ಶನ ನೀಡುವುದು ಹೊಸ ಪ್ರಯೋಗ. ಲಂಡನ್ನಿನ ಆಕ್ಸ್‌ಫರ್ಡ್ ಸರ್ಕಸ್‌ನ ಕಟ್ಟಡದಿಂದ ರೂಪದರ್ಶಿಗಳು ಕೊಕ್ಕೆಯಿಂದ ಜೋತು ಬಿದ್ದಿದ್ದು ಇದು ಮುಂಬರುವ ಫ್ಯಾಷನ್ ಸಪ್ತಾಹದ ಒಂದು ಝಲಕ್. ಇನ್ನು ಸಪ್ತಾಹ ಹೇಗಿರುತ್ತದೋ?



ಲಂಡನ್ನಿನ ಕಿರಾ ಭಾರಿ ಎದೆಗಾರಿಕೆಯುಳ್ಳ ಕಲಾವಿದೆ. ಕಲಾಕೃತಿ ರಚಿಸಲು ಆಕೆಗೆ ಕುಂಚ ಬೇಡವೇ ಬೇಡ. ಭಾರಿ ಗಾತ್ರದ ಸ್ತನವನ್ನೇ ಕುಂಚದಂತೆ ಬಳಸಿ ಇದುವರೆಗೆ ಸಾವಿರಾರು ಚಿತ್ರಗಳನ್ನು ರಚಿಸಿದ್ದಾಳೆ. ಒಂದೊಂದು ಚಿತ್ರವೂ 600- 700 ಪೌಂಡ್‌ಗೆ ಮಾರಾಟವಾಗುತ್ತಿದೆ. ಈ ಮಾಧ್ಯಮದ ಮೂಲಕ ಚಿತ್ರ ಬಿಡಿಸುವುದರಿಂದ ಮನಸ್ಸಿನಲ್ಲಿರುವ ಭಾವನೆಗಳೆಲ್ಲ ಸೀದಾ ಕ್ಯಾನ್‌ವಾಸ್ ಮೇಲೆ ಇಳಿಯುವುದಂತೆ.

ಡ್ರಂ ಬೀಟ್‌ಗೆ ಸರಿಯಾಗಿ ಹೆಜ್ಜೆ ಹಾಕುವ ಡಾನ್ಸರ್ ಎಂದರೆ ಹುಡುಗಿಯರು ಹಿಂದೆ ಬೀಳುತ್ತಾರಾ? ಇಲ್ಲ, ಕತ್ತು, ಸೊಂಟ, ಮುಖ ತಿರುಗಿಸುವವನನ್ನು ಯುವತಿಯರು ಆರಾಧಿಸುತ್ತಾರೆ ಎಂದು ಬ್ರಿಟನ್ನಿನ ಸಂಶೋಧಕರು ಪ್ರಕಟಿಸಿದ್ದಾರೆ.

ಇಂಡೋನೇಷ್ಯಾದ ಈ ಎರಡು ವರ್ಷದ ಬಾಲಕ ಚೈನ್ ಸ್ಮೋಕರ್. ನಿತ್ಯ 40 ಸಿಗರೇಟ್ ದಮ್ಮು ಎಳೆಯುತ್ತಿದ್ದನಂತೆ. ಸಿಗರೇಟ್ ತಂದುಕೊಟ್ಟು ಈ ಅಭ್ಯಾಸ ಮಾಡಿಸಿದ್ದು ತಂದೆ. ಈಗ ದುರಭ್ಯಾಸ ಬಿಡಿಸಿದವರು ವೈದ್ಯರು.





ಬೊಗೊಟಾದ ಎಡ್ವರ್ಡ್ ನಿನೊ ವಿಶ್ವದ ಅತ್ಯಂತ ಕುಳ್ಳ ವ್ಯಕ್ತಿ ಎಂದು ಗಿನ್ನೆಸ್ ದಾಖಲೆ ಪುಸ್ತಕಕ್ಕೆ ಸೇರಿದ್ದಾನೆ. 2 ಅಡಿ 3.46 ಇಂಚಿರುವ ನಿನೊಗೆ ಈಗ ವಿಶ್ವದ ನ್ಯಾನೊ ಎಂಬ ಹೆಗ್ಗಳಿಕೆ. 2 ಅಡಿ 5.37 ಇಂಚಿದ್ದ ಮೊಂಗೋಲಿಯಾದ ಪಿಂಗ್‌ಪಿಂಗ್ ತೀರಿಕೊಂಡ ಮೇಲೆ ಈ ನಿನೊ ಬೆಳಕಿಗೆ ಬಂದಿದ್ದಾನೆ.

ಲಂಡನ್ನಿನ ಸ್ಟೀವಿ ಮದುವೆಗೆ ಒಂದು ತಾಸಿದ್ದಾಗ ಹುಡುಗಿಯಾಗಿದ್ದವಳು ಮದುವೆ ನಡೆದು ತಾಸಿನ ನಂತರ ತಾಯಾಗಿದ್ದಾಳೆ. ಮದುವೆ ದಿನವೇ ಹೆರಿಗೆ ನೋವು ಶುರುವಾದರೂ ಆಸ್ಪತ್ರೆ ಸೇರದೆ ಮದುವೆ, ಆರತಕ್ಷತೆ ಎಲ್ಲವನ್ನೂ ಮುಗಿಸಿಕೊಂಡೇ ಆ್ಯಂಬುಲೆನ್ಸ್ ಏರಿದ್ದಾಳೆ. ಸ್ವಲ್ಪ ಮುಂಚೆಯೇ ಹೆರಿಗೆ ಆಗಿದ್ದರೆ ಮಗು ಎತ್ತಿಕೊಂಡೇ ಸಪ್ತಪದಿ ತುಳಿಯಬಹುದಿತ್ತು.



ಫಿಲಿಡೆಲ್ಫಿಯಾದಲ್ಲಿ ನ್ಯೂಡಿಸ್ಟ್ ಸಂಡೆ (ಬೆತ್ತಲೆ ಭಾನುವಾರ) ಭಾರಿ ಜನಪ್ರಿಯ. ಬಟ್ಟೆ ಅಲರ್ಜಿ ಇರುವವರು, ಧರಿಸಲು ಉಡುಪಿಲ್ಲದವರು ಎಲ್ಲಾ ಸೇರಿ ಸೈಕಲ್ ಸಿಕ್ಕಿಸಿಕೊಂಡು ಹೊರಟುಬಿಡುತ್ತಾರೆ. ಇಂಥ ಖಯಾಲಿ ಇರುವವರು ಫಿಲಿಡೆಲ್ಫಿಯಾಗೆ ಯಾತ್ರೆ ಬೆಳೆಸಬಹುದು.